OS 186/2021

ಡಿ. ಡಬ್ಲೂ 1



ದಿನಾಂಕ 27.7.2026 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು ವಾದಿ ಪರ ಶ್ರೀ ಎನ್.ಜಿ.ಪಿ. ವಕೀಲರಿಂದಃ-

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಾವೆಯ ವಿಚಾರವನ್ನು ನಾನು ತಿಳಿದು ಕೊಂಡಿರುತ್ತೇನೆ. ವಾದಿಯು ದಾವೆಯಲ್ಲಿ ಏನು ಪರಿಹಾರ ಕೋರಿರುತ್ತಾರೆ ಎಂದರೆ ಸಾಕ್ಷಿಯು ಜಮೀನು ತನ್ನದು ಎಂದು ದಾವೆ ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ನನ್ನ ವಿರುದ್ಧ ಪ್ರತಿಬಂಧಕಾಜ್ಞೆ ಆದೇಶ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸರ್ವೆನಂ 42 ರಲ್ಲಿ ಎಷ್ಟು ಫೋಡಿ ಆಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ . ಯಾವ ಫೋಡಿಯಲ್ಲಿ ಯಾರು ಇರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂ 42/1 ರಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ 42 ರಲ್ಲಿ ಒಟ್ಟು 3 ಫೋಡಿ ಇದ್ದು ಕೊನೆಯ ಫೋಡಿಯಲ್ಲಿನಾನು ಸ್ವಾಧೀನದಲ್ಲಿದ್ದೇನೆ. ನಾನು ಸ್ವಾಧೀನದಲ್ಲಿರುವ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ-ಚನ್ನಬಸಪ್ಪರವರ ಜಮೀನು, ಪಶ್ಚಿಮಕ್ಕೆ - ಗ್ರಾಮಠಾಣಾ , ಉತ್ತರಕ್ಕೆ - ಜಯಪ್ಪ , ದಕ್ಷಿಣಕ್ಕೆ - ಹೊಲ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದ ಚಕ್ಕುಬಂದಿಗೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ರೀತಿಯ ಚಕ್ಕುಬಂದಿ ಇರುವ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

2. ವಾದಿಯ ತಂದೆ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಂದೆ ಹೆಸರು ಕಾಂತ್ಯಪ್ಪ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ತಂದೆಯವರು ನನಗೆ ಆಸ್ತಿಯನ್ನು ನೀಡಿದ್ದರು ಎಂದು ತಿಳಿದುಕೊಂಡು ನಾನು ಪ್ರತಿವಾದ ಪತ್ರವನ್ನು ಬರೆಸಿರುತ್ತೇನೆ . ನಮ್ಮ ತಂದೆಯವರು ಸುಮಾರು 40 ವರುಷಗಳ ಹಿಂದೆ ಮರಣ ಹೊಂದಿರುತ್ತಾರೆ. 2021 ರಲ್ಲಿ ವಾದಿ ನನ್ನವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವೆ ದಾಖಲು ಮಾಡಿದ ಸಮಯದಲ್ಲಿ ನನ್ನ ತಂದೆಯವರು ಜೀವಂತ ಇರಲಿಲ್ಲ. ನನ್ನ ಪ್ರತಿವಾದ ಪತ್ರಕ್ಕೆ ನಾನು ಮಾಹಿತಿ ನೀಡುವಾಗ ನನ್ನ ತಂದೆಯವರು ಜೀವಂತ ಇರಲಿಲ್ಲ ಎಂದರೆ ಸರಿ.

2. ಬಸಮ್ಮರವರು ಗವಿಯಪ್ಪರವರ ಅಕ್ಕ. ಗವಿಯಪ್ಪ ಬಸಮ್ಮರವರ ತಮ್ಮನಾಗಿದ್ದು ಸದರಿ ಗವಿಯಪ್ಪ ನನಗೆ ತಂದೆಯಾಗಬೇಕು. ಗವಿಯಪ್ಪ ಬಸಮ್ಮರವರ ದತ್ತು ಮಗ ಎಂದರೆ ಸರಿ. ಗವಿಯಪ್ಪರವರು ಬಸಮ್ಮರವರ ದತ್ತುಮಗ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಯಾವ ವರುಷ ಯಾವ ದಿನಾಂಕದಂದು ದತ್ತುಪತ್ರ ಅಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದತ್ತುಪತ್ರ ನೋಂದಾವಣಿ ಆಗಿದ್ದು ಯಾವ ವರುಷ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದತ್ತುಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದತ್ತುಪತ್ರವನ್ನು ಯಾರು ಯಾರಿಗೆ ಮಾಡಿ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದತ್ತು ಮಾಡುವಾಗ ಸಾಂಪ್ರದಾಯಿಕ ಆಚರಣೆಗಳನ್ನು ಮಾಡಿ ದತ್ತು ನೀಡಿರುತ್ತಾರೆ. ಸದರಿ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಗವಿಯಪ್ಪರವರನ್ನು ಬಸಮ್ಮರವರು ದತ್ತು ಪಡೆಯದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದತ್ತು ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕ 17.5.1966 ರಂದು ಗವಿಯಪ್ಪ ಮತ್ತು ಬಸಮ್ಮರವರು ಕೆಂಚಪ್ಪ ಮತ್ತು ಕಂತ್ಯಪ್ಪ ರವರಿಗೆ ಸರ್ವೆ ನಂ 42/1 ನ್ನು ನಿಪಿ 6 ರಂತೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಗವಿಯಪ್ಪ ಮತ್ತು ಬಸಮ್ಮರವರ ಸಹಿ ಇದೆ ಎಂದರೆ ನನಗೆ ಓದಲು ಬರುವುದಿಲ್ಲ. ನಿಪಿ 6 ರಲ್ಲಿ ಸದರಿಯವರ ಹೆಬ್ಬೆಟ್ಟಿನ ಗುರುತು ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

4. ದಿನಾಂಕ 17.5.1966 ರಂದು ಗವಿಯಪ್ಪ ಮತ್ತು ಬಸಮ್ಮರವರು ಕ್ರಯಪತ್ರವನ್ನು ಮಾಡಿ ಅಂದೇ ಸರ್ವೆ ನಂ 42/1 ರ ಸ್ವಾಧೀನವನ್ನು ಹಸ್ತಾಂತರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 6 ಕ್ರಯಪತ್ರಕ್ಕೆ ಗವಿಯಪ್ಪ ಮತ್ತು ಬಸಮ್ಮರವರು ಸಹಿ ಮಾಡಿದ್ದು ಅಂದೇ ಕ್ರಯಪತ್ರದ ಪ್ರಕಾರ 42/1 ರ ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವಿಚಾರ ನನಗೆ ತಿಳಿದಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಕ್ರಯಪತ್ರದ ಪ್ರಕಾರ ಸರ್ವೆ ನಂ 42/1 ರ ಜಮೀನಿನ ಖಾತೆಯು ಕಂತ್ಯಪ್ಪ ಮತ್ತು ಕೆಂಚಪ್ಪರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 1966 ರಿಂದ 2000-2001 ರವರೆಗೂ ದಾವಾಸ್ತಿಯ ಖಾತೆ ಪಹಣಿಗಳು ವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ಕ್ರಯಪತ್ರದ ಆಧಾರದ ಮೇಲೆ ನಮೂನೆ 21 ನ್ನು ಪ್ರಚುರ ಪಡಿಸಿ ಯಾವುದೇ ದಾಖಲು ಆಗದ ಕಾರಣ ದಾವಾ ಸ್ವತ್ತಿನ ಖಾತೆಯನ್ನು ಕಂತ್ಯಪ್ಪರವರ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಬಸಮ್ಮರವರ ಸಹಿಯನ್ನು ಪಡೆದು ದಾವಾ ಸ್ವತ್ತಿನ ಖಾತೆಯನ್ನು ಕಂತ್ಯಪ್ಪರವರ ಹೆಸರಿಗೆ ಬದಲಾವಣೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ಕ್ರಯಪತ್ರವನ್ನು ನಾನಾಗಲೀ , ನನ್ನ ತಂದೆಯವರಾಗಲೀ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ.

5. 1966 ರಿಂದಲೂ ದಾವಾ ಸ್ವತ್ತಿಗೆ ಸಂಬಂಧಿಸಿ ಕಂತ್ಯಪ್ಪ ಮತ್ತು ಕೆಂಚಪ್ಪರವರು ಕಂದಾಯ ಪಾವತಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು 1 ಎಕರೆ 04 ಗುಂಟೆ ಜಮೀನಿಗೆ ಸಂಬಂಧಿಸಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದ ಪತ್ರವನ್ನು ದಾಖಲಿಸಿದಾಗಲೂ ದಾವಾಸ್ತಿಯ ವಿಸ್ತೀರ್ಣ ನನಗೆ ಗೊತ್ತಾಗಿರುವುದಿಲ್ಲ. 1966 ರ ಕ್ರಯಪತ್ರದಲ್ಲಿ ಕೆಂಚಪ್ಪರವರಿಗೆ ಜಂಟಿಯಾಗಿ ಕ್ರಯಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಂತ್ಯಪ್ಪ ಮತ್ತು ಕೆಂಚಪ್ಪರವರಿಗೆ ನನ್ನ ತಂದೆ ಗವಿಯಪ್ಪ ಮತ್ತು ಬಸಮ್ಮರವರು ಜಂಟಿಯಾಗಿ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

6. ಕೆಂಚಪ್ಪರವರ ಮಗ ಯಾರು ಎಂದು ನನಗೆ ಗೊತ್ತಿಲ್ಲ . ಕೆಂಚಪ್ಪರವರ ಮಗ ಸುರೇಶರವರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಯಾವ ಸ್ವತ್ತಿನ ಮೇಲೆ ದಾವೆ ಸಲ್ಲಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ 11/2 ರಲ್ಲಿರುವ 19 ಗುಂಟೆ ಜಮೀನಿಗೆ ಸಂಬಂಧಿಸಿ ಸುರೇಶರವರು ನನ್ನ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸುರೇಶರವರು ದಾಖಲಿಸಿದ

ದಾವೆಯಲ್ಲಿ ನಾನು ಪಕ್ಷಗಾರನಾಗಿದ್ದೇನೆ. ಸದರಿ ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ವಾದಿಯು ನನ್ನವಿರುದ್ಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿ ವಿಚಾರಣೆಗೆ ಬಾಕಿಯಲ್ಲಿದೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ದಾವಾ ಸ್ವತ್ತಿನ ಖಾತೆ ಪಹಣಿಯನ್ನು ಪ್ರಶ್ನಿಸಿ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. ಸರ್ವೆ ನಂ 42/1 ನನಗೆ ನನ್ನ ತಂದೆಯವರು ದತ್ತು ಮಗನಾಗಿದ್ದರಿಂದ ಬಂದಿರುತ್ತದೆ. ಎಂಆರ್ 15/1990-91 ರಂತೆ ಖಾತೆ ಬದಲಾಯಿಸುವಾಗ ವಾದಿಯ ತಂದೆಗೆ ನೋಟೀಸು ನೀಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಕಂದಾಯ ಅಧಿಕಾರಿಗಳು ನನ್ನ ಮತ್ತು ಗವಿಯಪ್ಪರವರೊಂದಿಗೆ ಶಾಮೀಲಾಗಿ ದಾವಾಸ್ತಿಯ ಖಾತೆ ಪಹಣಿ ವಾದಿಯ ತಂದೆ ಹೆಸರಿನಲ್ಲಿದ್ದರೂ ಸದರಿಯವರಿಗೆ ನೋಟೀಸು ನೀಡದೇ ಕಾನೂನು ಬಾಹಿರವಾಗಿ ಖಾತೆ ಪಹಣಿ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ದಾವಾಸ್ತಿಯ ಖಾತೆ ಪಹಣಿಯನ್ನು ನನ್ನ ಹೆಸರಿಗೆ ಯಾವಾಗ ಬದಲಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು 25-26 ವರುಷಗಳ ಹಿಂದೆಯೇ ಬದಲಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರ ಮರಣಾನಂತರ ಮರಣಶಾಸನ ಪತ್ರದ ಪ್ರಕಾರ ನನ್ನ ಹೆಸರಿಗೆ ಖಾತೆ ದಾಖಲು ಆಗಿರುತ್ತದೆ. ನಾನು ಮರಣಶಾಸನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಮರಣಶಾಸನ ಪತ್ರವನ್ನು ಯಾರು ಯಾವ ದಿನಾಂಕದಂದು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಮರಣಶಾಸನ ಬರೆದ ಬರಹಗಾರರು ಮತ್ತು ಸಾಕ್ಷಿದಾರರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ವಿಲ್ಲನ್ನು ನೋಡಿರುವುದಿಲ್ಲ. ಯಾವುದೇ ಮರಣಶಾಸನ ಪತ್ರ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

8. ನಾನು ದಾವಾಸ್ತಿಯ ಖಾತೆ ಪಹಣಿಯನ್ನು ಪೌತಿ ಮೇರೆಗೆ ಎಂದು ಕಂದಾಯ ಇಲಾಖೆ ಅಧಿಕಾರಿಗಳ ಜೊತೆ ಶಾಮೀಲಾಗಿ ನನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2001 ರವರೆಗೂ ದಾವಾಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯ 9 ಮತ್ತು 12 ನೇ ಕಂಡಿಕೆಯಲ್ಲಿ ವಾದಿಯ ತಂದೆ ಹೆಸರೇ ಇತ್ತು ಎಂದರೆ ನನಗೆ ಗೊತ್ತಿಲ್ಲ.

1966 ರಲ್ಲೇ ಗವಿಯಪ್ಪ ಮತ್ತು ಬಸಮ್ಮರವರು ಸರ್ವೆ ನಂ 42/1 ರ ಆಸ್ತಿಯಲ್ಲಿ ಕ್ರಯಪತ್ರ ಮಾಡಿಕೊಡುವ ಮೂಲಕ ಸದರಿ ಆಸ್ತಿಯಲ್ಲಿ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರ ಬರೆದುಕೊಟ್ಟ ನಂತರ ಗವಿಯಪ್ಪ ಮತ್ತು ಬಸಮ್ಮರವರಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು , ಸ್ವಾಧೀನ , ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. 1966 ರ ಕ್ರಯಪತ್ರದ ಪ್ರಕಾರ ವಾದಿಯ ತಂದೆ ಮತ್ತು ವಾದಿಯೇ ದಾವಾಸ್ತಿಯ ಸಂಪೂರ್ಣ ಸ್ವಾಧೀನದಾರರು , ಮಾಲೀಕರು , ಹಕ್ಕುದಾರರು ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಹಾಲೀ ವಾದಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ. ನಾನು ಎಂದಿಗೂ ದಾವಾಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನನ್ನ ತಂದೆಯ ಕಾಲದಿಂದಲೂ ನಾನೇ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.